ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ
ನ್ಯಾಯಾಧೀಶರ ನ್ಯಾಯಾಲಯ, ಹಾಸನ

**ಸ್ಪೆಷಲ್ ಕೇಸ್ ನಂಃ 756/2023**

| | ಚಾಸಾಃ 5 | ಅಸಾಃ 15 |
|---|---|---|
| ಹೆಸರು | ಮಂಜಶೆಟ್ಟಿ | |
| ತಂದೆಯ ಹೆಸರು : | ರಂಗಶೆಟ್ಟಿ | |
| ವಯಸ್ಸುः | 60 ವರ್ಷ | |
| ಕೆಲಸಃ | ನಿವೃತ್ತ ಪಿ ಎಸ್ ಐ | |
| ವಾಸಸ್ಥಳ | ಹಾಸನ | |

ದಿನಾಂಕಃ **25.10.2025** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ

ನಾನು 2023 ರಿಂದ 2025 ರವರೆಗೆ ಹಾಸನ ಬಡವಾಣೆ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 17.10.2023 ರಂದು ನಾನು ಮತ್ತು ಚಾಸಾ-24 ಚಾಲಕ ರವರು ಕೆಎ-13-ಜಿ-791 ಟಾಟಾ ಸುಮೊ ವಾಹದಲ್ಲಿ ರಾತ್ರಿ 10.30 ಗಂಟೆ ಸಮಯದಲ್ಲಿ ಗಸ್ತು ಮಾಡುತ್ತಿದ್ದು, 11.00 ಗಂಟೆಗೆ ಬಿ. ಕಾಟೀಹಳ್ಳಿಯ ಅನ್ನಪೂರ್ಣೇಶ್ವರಿ ಹೊಟೇಲ್ ಹತ್ತಿರ 4-5 ಜನರು ಮಾತನಾಡುತ್ತಿದ್ದಾಗ, ನಾನು ಎಲ್ಲರಿಗೂ ಕತ್ತಲೆಯಾಗಿದೆ ಹೊರಡಿ ಮನೆಗೆ ಎಂದು ಹೇಳಿದಾಗ, ಅವರು ನಾವೆಲ್ಲರೂ ಸ್ನೇಹಿತರು ಮಾತನಾಡುತ್ತಿದ್ದೇವೆ ಹೊರಡುತ್ತೇವೆ ಎಂದು ತಿಳಿಸಿರುತ್ತಾರೆ. ಅಷ್ಟರಲ್ಲಿ ಎನ್ ಡಿ ಆರ್ ಕೆ ಕಾಲೇಜಿನ ಹತ್ತಿರ ಚೈನ್ ಕಳ್ಳತನ ಆಗಿದ್ದರಿಂದ ಕೂಡಲೇ ಬರಲು ತಿಳಿಸಿರುತ್ತಾರೆ. ರಾತ್ರಿ ಕರ್ತವ್ಯ ಮುಗಿಸಿ ಬೆಳಗಿನ ಜಾವಾ 5.00 ಗಂಟೆಗೆ ಠಾಣೆಗೆ ಹಾಜರಾಗಿರುತ್ತೇನೆ. ವಿರಾಮಕ್ಕೆಂದು ಮನೆಗೆ ತೆರಳಿರುತ್ತೇನೆ.

ದಿ. 18.10.2023 ರಂದು ಮದ್ಯಾಹ್ನ 2.00 ಗಂಟೆಗೆ ಠಾಣೆಗೆ ಹಾಜರಾಗಿರುತ್ತೇನೆ. ದಿ. 17.10.2023 ರ ರಾತ್ರಿ ಬಿ ಕಾಟೀಹಳ್ಳಿಯಲ್ಲಿ ಕಾಂತರಾಜುರವರ ಕೊಲೆಯಾಗಿದೆ ಎಂಬ ವಿಚಾರ ತಿಳಿದು ಬಂದಿದ್ದು, ಕ್ರೈಂ ಸಿಬ್ಬಂದಿಯವರು ಸಿಸಿಟಿವಿ ಕ್ಯಾಮೆರಾದಲ್ಲಿ ದೃಶ್ಯಾವಳಿಯಲ್ಲಿ ಆರೋಪಿತರು ಸಿಕ್ಕಿರುತ್ತಾರೆ ಎಂದು ಹೇಳಿ 4 ಜನ ಆರೋಪಿತರನ್ನು ಠಾಣೆಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ನಾನು ಅವರನ್ನು ಡಿವೈಎಸ್‌ಪಿ ರವರ ಮುಂದೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿ ನಿವೇದನೆಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-31 ಎಂದು ಸಾಕ್ಷಿಯ ಸಹಿಯನ್ನು ನಿಪಿ-31(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ 1 ರಿಂದ 4 ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಸ್ಟೇಷನ್ ಹೌಸ್ ಡೈರಿಯ ಕ್ರಮ ಸಂಖ್ಯೆ 40 ಹಾಗೂ ದಿ. 18.10.2023 ಕ್ರಮ ಸಂಖ್ಯೆ 8 ನ್ನು ನೋಡಿ ಗುರುತಿಸಿರುತ್ತಾರೆ. ಸ್ಟೇಷನ್ ಹೌಸ್ ಡೈರಿಯನ್ನು ನಿಪಿ-32 ಎಂದು ಸಂಬಂಧಪಟ್ಟ ಕ್ರಮಸಂಖ್ಯೆಗಳನ್ನು ಕ್ರಮವಾಗಿ ನಿಪಿ-32(ಎ) ಮತ್ತು (ಬಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ 1ನೇ ಆರೋಪಿ ಪರ ಶ್ರೀ ಹೆಚ್ ಎಸ್ ಎಂ ಆರ್ ವಕೀಲರಿಂದಃ</u>

ರಾತ್ರಿ 10.30 ಗಂಟೆಗೆ ನನ್ನ ಕರ್ತವ್ಯ ಪ್ರಾರಂಭವಾಗಿರುತ್ತದೆ. ಆ ದಿನ ಠಾಣ ಉಸ್ತುವಾರಿಯಲ್ಲಿ ಹೆಚ್ ಸಿ 116 ರವರು ಇದ್ದರು. ರಾತ್ರಿ 10.30 ಗಂಟೆಗೆ ಗಸ್ತು ಪ್ರಾರಂಭ ಮಾಡಿ ಕುವೆಂಪುನಗರ, ಹಾಲಿನ ಡೈರಿ ಸರ್ಕಲ್ ಕಡೆ ಹೋಗಿರುತ್ತೇವೆ. ನಮ್ಮ ಠಾಣೆಯಿಂದ ಡೈರಿ ಸರ್ಕಲ್ 2.5 ಕಿ.ಮೀ ಇದೆ ಎಂದರೆ ಸಾಕ್ಷಿ 3.00 ಕಿ.ಮೀ ಇದೆ ಎಂದು ನುಡಿಯುತ್ತಾರೆ. 3.00 ಕಿ.ಮೀ ವಾಹನದಲ್ಲಿ ಹೋಗಲು 5 ನಿಮಿಷ ಸಾಕು ಎಂದರೆ ಸರಿ. ನಾನು ಠಾಣೆಗೆ ಬಂದಾಗ ಎಸ್ ಹೆಚ್ ಓ ರವರ ಮುಂದೆ ಏನು ವಿಶೇಷವಿಲ್ಲವೆಂದು ಡೈರಿಯಲ್ಲಿ ನಮೂದನೆ ಮಾಡಿರುತ್ತೇನೆ ಎಂದರೆ ಸರಿ. ಬೇರೆ ಏನು ಬರೆದಿರುವುದಿಲ್ಲ ಎಂದರೆ ಸರಿ. ಬಿ ಕಾಟೀಹಳ್ಳಿಯಲ್ಲಿ ನಾನು ಜೀಪಿನಿಂದ ಕೆಳಗೆ ಇಳಿದಿರುವುದಿಲ್ಲ.

ಬಿ ಕಾಟೀಹಳ್ಳಿಯಲ್ಲಿ ಹೊಟೇಲ್, ಡೈರಿ, ಬಾರ್, ಬೇಕರಿ ಇರುವುದರಿಂದ ರಾತ್ರಿ 11.00 ಗಂಟೆಗೂ ಜನರು ಓಡಾಡುತ್ತಾರೆ ಹಾಗೂ ವಾಯು ವಿಹಾರ ಮಾಡುತ್ತಾ ಅಲ್ಲಲ್ಲಿ ನಿಂತಿರುತ್ತಾರೆ ಎಂದರೆ ಸರಿ. ನಾನು ಹೇಳಿದಾಗೆ ಬಿ ಕಾಟೀಹಳ್ಳಿಯಲ್ಲಿ ಯಾರ ಇರಲಿಲ್ಲ ಹಾಗೂ ಯಾರಿಗೂ ಮನೆಗೆ ಹೋಗಿ ಎಂದು ಹೇಳಿರುವುದಿಲ್ಲ, ಮೇಲಾಧಿಕಾರಿಯವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಕೇಸಿನ ಬಗ್ಗೆ ಏನು ಗೊತ್ತಿರುವುದಿಲ್ಲ, ನನ್ನ ಮೇಲಾಧಿಕಾರಿಯವರ ಮಾತನ್ನು ಕೇಳಿ ನಿವೇದನೆಗೆ ನಾನು ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಈ ಕೇಸಿನ ಬಗ್ಗೆ ಏನು ಗೊತ್ತಿಲ್ಲದಿದ್ದರೂ ಮೇಲಾಧಿಕಾರಿಯವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **3**ನೇ ಆರೋಪಿ ಪರ ಶ್ರೀ ಜೆ ಬಿ ರವರು ಎಂ ಎನ್ ಜೆ ವಕೀಲರ ಪರವಾಗಿಃ</u>

ತನಿಖಾಧಿಕಾರಿಯವರು ಐಡೆಂಟಿಫಿಕೇಶನ್ ಪೆರೈಡ್ ಮಾಡಿಸಿರುವುದಿಲ್ಲ. ನನಗೆ ಬಾಡಿ ಕ್ಯಾಮೆರಾ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಆ ದಿನ ನನ್ನ ಬಳಿ ಇರಲಿಲ್ಲ ಎಂದು ನುಡಿಯುತ್ತಾರೆ. ಮೇಲಾಧಿಕಾರಿಯವರ ಆದೇಶದ ಪ್ರಕಾರಣ ಬಾಡಿ ಕ್ಯಾಮೆರಾವನ್ನು ಹಾಕಿಕೊಂಡು ಕರ್ತವ್ಯ ನಿರ್ವಹಿಸಬೇಕು ಎಂದರೆ ಸರಿ. ನನಗೆ ಘಟನೆ ಬಗ್ಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ನಾನು ಬಿ ಕಾಟೀಹಳ್ಳಿಯಲ್ಲಿ ಜನರು ಗುಂಪುಕಟ್ಟಿಕೊಂಡಿದ್ದರು ಎಂದು ಮಾಹಿತಿಯನ್ನು ಕೊಟ್ಟಿರುವುದಿಲ್ಲ. ಅದರ ಬಗ್ಗೆ ಮಾಹಿತಿ ನೀಡಲು ತೊಂದರೆ ಇರಲಿಲ್ಲ. ಕರ್ತವ್ಯ ಮುಗಿಸಿಕೊಂಡು ಮನೆಗೆ ಹೋಗಿ ಮದ್ಯಾಹ್ನ ಠಾಣೆಗೆ ಬಂದಿರುತ್ತೇನೆ. ಅಲ್ಲಿಯವರೆಗೂ ಕೊಲೆಯ ಬಗ್ಗೆ ಮಾಹಿತಿ ಇರಲಿಲ್ಲ.

ಮದ್ಯಾಹ್ನ ಸುಮಾರು 3.00 ಗಂಟೆಗೆ ಡಿವೈಎಸ್‌ಪಿ ರವರಿಗೆ ನಿವೇದನೆ ಕೊಟ್ಟಿರುತ್ತೇನೆ. ಈ ಕೇಸಿಗೆ ಅನುಕೂಲವಾಗುವಂತೆ ನಿವೇದನೆಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆ ದಿನ ಗಸ್ತುವಿಗೆ ಹೋಗಿರುವುದಿಲ್ಲ,

ಠಾಣೆಯಲ್ಲಿ ಸುಳ್ಳು ನಿವೇದನೆಯನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮೇಲಿನ ಆರೋಪಿತರ ಪರ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ತಿಳಿಸಿರುತ್ತಾರೆ.

ಪಾಟೀ ಸವಾಲುಃ 4ನೇ ಆರೋಪಿ ಪರ ಶ್ರೀ ಎಂ ಜೆ ಪಿ ವಕೀಲರಿಂದಃ

ನಾನು ಮನೆಯಿಂದ ಠಾಣೆಗೆ ರಾತ್ರಿ 10.00 ಗಂಟೆಗೆ ಬಂದಿರುತ್ತೇನೆ. ನಾನು ಕ್ವಾಟ್ರಸ್‌ನಲ್ಲಿ ವಾಸ ಮಾಡುತ್ತೇನೆ. ನನಗೆ ಠಾಣೆಗೆ ಬರಲು ಮೇಲಾಧಿಯವರಿಂದ ಯಾವುದೇ ಆದೇಶ ಇರಲಿಲ್ಲ. ಆ ದಿನ ಠಾಣ ಉಸ್ತುವಾರಿಯಲ್ಲಿ ಹೆಚ್ ಸಿ 116 ರವರು ಇದ್ದರು ಅವರ ಹೆಸರನ್ನು ಈಗ ಮರೆತಿರುತ್ತೇನೆ. ಅವರು ನಮ್ಮ ಠಾಣೆಯಲ್ಲಿ ಕೆಲಸ ಮಾಡುತ್ತಾರೆ. ಅವರ ಹೆಸರನ್ನು ತಿಳಿದುಕೊಳ್ಳಲು ತೊಂದರೆ ಇರಲಿಲ್ಲವಾ ಎಂದರೆ ಸಾಕ್ಷಿ ನಮ್ಮ ಸಿಬ್ಬಂದಿಯವರನ್ನು ನಾವು ನಂಬರ್ ಮುಖಾಂತರ ಕರೆಯುತ್ತೇವೆ, ಅವರ ಹೆಸರು ವಿಳಾಸ ಗೊತ್ತಿಲ್ಲ. ನಮ್ಮ ಠಾಣೆಯಲ್ಲಿ ಆ ದಿನ ಒಬ್ಬ ಸೆಂಟ್ರಿ ಇದ್ದನು. ನನ್ನ ನಿವೇದನೆಯಲ್ಲಿ ನಾನು ಎಷ್ಟು ಗಂಟೆಗೆ ಹೋಗಿ ಬಂದಿರುತ್ತೇನೆ ಎಂದು ನಮೂದನೆ ಮಾಡಿರುವುದಿಲ್ಲ ಡೈರಿಯಲ್ಲಿ ಮಾಡಿರುತ್ತೇನೆ. ನಿವೇದನೆಯಲ್ಲಿ ನಮೂದನೆ ಮಾಡಲು ತೊಂದರೆ ಇರಲಿಲ್ಲ. ಮೇಲಾಧಿಕಾರಿಯವರ ಮಾರ್ಗದರ್ಶನದ ಮೇರೆಗೆ ಗಸ್ತುವಿಗೆ ಹೋಗಿರುತ್ತೇನೆ. ಅದನ್ನು ನಾನು ನಿವೇದನೆಯಲ್ಲಿ ಬರೆದಿಲ್ಲ ಎಂದರೆ ಸರಿ. ನಾನು ಠಾಣೆಯಿಂದ ಹೊರಟಾಗ 10.30 ಗಂಟೆ ಆಗಿರುತ್ತದೆ.

ಘಟನಾ ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಮದ್ಯದಲ್ಲಿ ಯಾವುದೇ ವಾಹನಗಳ ತಪಾಸಣೆ ಮಾಡಿರುವುದಿಲ್ಲ. ಬೀದಿ ದೀಪಗಳು ಎಷ್ಟು ವಾಟ್ಸ್ ಎಂದು ತಿಳಿದುಕೊಂಡಿರುವುದಿಲ್ಲ. ಲೈಟ್ ಎಷ್ಟು ವಾಟ್ಸ್ ಎಂದು ತಿಳಿಯದೇ ಇರುವುದರಿಂದ ಯಾರು ಯಾರು ಎಷ್ಟು ಜನರು ಇದ್ದರು ಎಂದು ನಿಖರವಾಗಿ ಗೊತ್ತಾಗುವುದಿಲ್ಲ ಎಂದರೆ ಸರಿ. ನನ್ನ ನಿವೇದನೆಯಲ್ಲಿ ಅಲ್ಲಿದಂತಹ 4-5 ಜನರು ಯಾವ ರೀತಿಯ ಬಟ್ಟೆ ಧರಿಸಿದ್ದರು ಎಂದು ನಮೂದನೆ ಮಾಡಿರುವುದಿಲ್ಲ

ಎಂದರೆ ಸರಿ. ಈ ಮಾಹಿತಿ ನನ್ನ ಸಿಬ್ಬಂದಿಯವರು ತಿಳಿಸಿದ ನಂತರ ಗೊತ್ತಾಗಿದೆ ಎಂದರೆ ಸರಿ. ಆರೋಪಿತರಿಗೂ ಈ ಕೇಸಿಗೂ ಸಂಬಂಧವಿರುವುದಿಲ್ಲ ಮೇಲಾಧಿಕಾರಿಯವರ ಆದೇಶದ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮೇಲಿನ ಆರೋಪಿತರ ಪರ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ತಿಳಿಸಿರುತ್ತಾರೆ.

ಪಾಟೀ ಸವಾಲುಃ 2ನೇ ಆರೋಪಿ ಪರ ಶ್ರೀ ಎಂ ಜೆ ಪಿ ವಕೀಲರಿಂದಃ

ನಮ್ಮ ಠಾಣೆಯಲ್ಲಿ ಕೈ ಬರವಣಿಗೆಯ ಸ್ವಂತ ಡೈರಿ ಇರುತ್ತದೆ. ನಾವು ಎಲ್ಲಿಯೇ ಹೋದರು ಅದರಲ್ಲಿ ನಮೂದು ಮಾಡುತ್ತೇವೆ ಎಂದರೆ ಸರಿ. ಅದನ್ನು ಈ ಕೇಸಿನಲ್ಲಿ ಹಾಜರುಪಡಿಸಿರುವುದಿಲ್ಲ.

ಮೇಲಿನ ಆರೋಪಿತರ ಪರ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ತಿಳಿಸಿರುತ್ತಾರೆ.

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರ.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ